

ಸುರಂಗ ಕಾರ್ಯಾಚರಣೆಯಲ್ಲಿ ಪಳಗಿರುವ ಆಸ್ಟ್ರೇಲಿಯಾದ ಆರ್ನಾಲ್ಡ್ ಡಿಕ್ಸ್ ಅವರಿಂದ ಕಾರ್ಯಾಚರಣೆಗೆ ಮೊದಲಿನ ಪೂಜೆ.

### ‘ರಾಣಿಗಂಜ್’ನ ಸಾಹಸ ಗಾಥೆ

ಇಪ್ಪತ್ನಾಲ್ಕು ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಬರ್ಧಮಾನ್ ಜಿಲ್ಲೆಯ ಅಸನ್‌ಸೋಲ್ ಕಲ್ಲಿದ್ದಲು ಗಣಿಯಲ್ಲಿ ನಡೆದ ದುರಂತ ಮತ್ತು ರಕ್ಷಣಾ ಕಾರ್ಯದ ಕತೆಯಿದು. ಅದು 1989ರ ನವೆಂಬರ್ ತಿಂಗಳ 13ನೇ ತಾರೀಖಿನ ರಾತ್ರಿ. ರಾಣಿಗಂಜ್‌ನ ಮಹಾಬಿರ್ ಕೊಲ್ಲೆರಿ ಕಲ್ಲಿದ್ದಲು ಗಣಿಯಲ್ಲಿ ಯಾರೂ ಕಂಡು ಕೇಳರಿಯದ ದುರಂತವೊಂದು ಸಣ್ಣ ಅಜಾಗರೂಕತೆಯಿಂದ ನಡೆದುಹೋಗಿತ್ತು.

ಆಗಷ್ಟೇ ಪತ್ತೆ ಮಾಡಲಾಗಿದ್ದ ಕಲ್ಲಿದ್ದಲಿನ ಸೀಮ್‌ನ (ಹಾಸು) ಮೇಲ್ಭಾಗವನ್ನು ಕಾರ್ಮಿಕನೊಬ್ಬ ಕುತೂಹಲಕ್ಕಾಗಿ ಅಲುಗಾಡಿಸಿ, ಅಲ್ಲಿಂದ ಒಂದು ಚಿಕ್ಕ ತುಂಡನ್ನು ತೆಗೆದೇ ಬಿಟ್ಟ. ಕಲ್ಲು ತೆಗೆದ ಜಾಗದಿಂದ ಸಾಗರದೋಪಾದಿಯಲ್ಲಿ ನೀರು ನುಗ್ಗಿ 320 ಅಡಿ ಆಳದಲ್ಲಿ ಕೆಲಸ ಮಾಡುತ್ತಿದ್ದ 232 ಕಾರ್ಮಿಕರು ಕೆಲವೇ ನಿಮಿಷಗಳಲ್ಲಿ ಅಪಾಯಕ್ಕೆ ಸಿಲುಕಿಕೊಂಡರು. ಬಾಂಬ್ ಸಿಡಿಸಿ ಅಗೆದ ಗುಂಡಿಗಳ ಪಕ್ಕದಲ್ಲೇ ಇದ್ದ ಲಿಫ್ಟ್‌ಗಳ ಮೂಲಕ 161 ಜನರು ಕೂಡಲೇ ಹೊರಬಂದು ಜೀವ ರಕ್ಷಿಸಿಕೊಂಡರು. ಉಳಿದ 71 ಜನ ಗಣಿಯ ಆಳದ ಗುಂಡಿಗಳಲ್ಲಿ ಸಿಲುಕಿಕೊಂಡರು.

ನೀರಿನ ಪ್ರವಾಹ ಏರುತ್ತಾ ಹೋದಂತೆ ಆರು ಜನ ಉಳಿದವರ ಕಣ್ಣ ಮುಂದೆಯೇ ಮುಳುಗಿಬಿಟ್ಟರು. ಉಳಿದ 65 ಜನ ತಮ್ಮ ಕೈಗೆ ಸಿಕ್ಕ ಕೋಡುಗಲ್ಲುಗಳನ್ನು ಹಿಡಿದುಕೊಂಡು ನೇತಾಡುತ್ತ, ತಮ್ಮ ರಕ್ಷಣೆಗೆ ಯಾರಾದರೂ ಬರುತ್ತಾರಾ ಎಂದು ಕಾಯತೊಡಗಿದರು. ಪುಣ್ಯವಶಾತ್ ಇವರು ಸಿಲುಕಿಕೊಂಡಿದ್ದ ಜಾಗಕ್ಕೂ, ಗಣಿಯ ಮೇಲ್ಭಾಗದ ಸೈಟ್ ಆಫೀಸಿಗೂ ಬಿಎಸ್‌ಎನ್‌ಎಲ್ ದೂರವಾಣಿ ಸಂಪರ್ಕವಿತ್ತು. ‘ನಾವಿಷ್ಟು ಜನ ಇಲ್ಲಿ ಕತ್ತಲು ಮತ್ತು ನೀರಿನಲ್ಲಿ ಸಿಲುಕಿ ಹಾಕಿಕೊಂಡಿದ್ದೇವೆ’ ಎಂದು ಮೇಲಿನವರಿಗೆ ಸಂದೇಶ ಕಳಿಸಿದರು.

ಹಲವು ಸಬ್‌ಮರ್ಸಿಬಲ್ ಪಂಪ್‌ಗಳನ್ನು ಬಳಸಿ, ಗಣಿ ಆಳದಲ್ಲಿರುವ ನೀರನ್ನು ಹೊರತೆಗೆಯುವ ಪ್ರಯತ್ನ ಮೊದಲು ಶುರುವಾಯಿತು.

### ಉಗಲಿದ ಜೀವ

ಉತ್ತರಕಾಶಿ ಸುರಂಗದ ರಕ್ಷಣಾ ಕಾರ್ಯ ನಡೆದ ಸ್ಥಳದಲ್ಲಿ ಯಾವುದೇ ಜೀವ ಹಾನಿಯಾಗಿಲ್ಲ, ನಿಜ. ಆದರೆ ಸುರಂಗದಲ್ಲಿ ಸಿಕ್ಕಿಹಾಕಿಕೊಂಡವರನ್ನು ಹೊರ ತೆಗೆಯಲು ಬೇಕಾಗಿದ್ದ ಕೊರೆಯುವ ಯಂತ್ರಗಳನ್ನು ಡೆಹರಾಡೂನ್‌ನಿಂದ ಹೃಷಿಕೇಷ–ಗಂಗೋತ್ರಿ ರಾಷ್ಟ್ರೀಯ ಹೆದ್ದಾರಿಯ ಮೂಲಕ ತರಿಸಲಾಗುತ್ತಿತ್ತು. ಯಂತ್ರ ತರುತ್ತಿದ್ದ ಲಾರಿ ರಾಣಿಪೋಕ್ರಿ ನರೇಂದ್ರನಗರ ಬೈಪಾಸ್ ರಸ್ತೆಯ ಬಳಿ ಇರುವ ಗುಜ್ರಾಡ ಸೇತುವೆಯ ಪಕ್ಕದ ಕಮರಿಗೆ ಮಗುಚಿಕೊಂಡು ಲಾರಿ ಡ್ರೈವರ್ ತೀವ್ರವಾಗಿ ಗಾಯಗೊಂಡಿದ್ದರು. ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅವರು ಬದುಕುಳಿಯಲಿಲ್ಲ. ಉಳಿದಿಬ್ಬರು ಲಾರಿಯಿಂದ ಹಾರಿ ಸಣ್ಣ ಪುಟ್ಟ ಗಾಯಗಳಿಂದ ಬಚಾವಾದರು.



ರಾಣಿಗಂಜ್ ಕಾರ್ಯಾಚರಣೆ ಘಟನೆಯನ್ನಾಧರಿಸಿದ, ಅಕ್ಷಯ್ ಕುಮಾರ್ ನಟನೆಯ ‘ಮಿಷನ್ ರಾಣಿಗಂಜ್’ ಚಿತ್ರದ ದೃಶ್ಯ